**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ (ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರ) ಇವರ ಶೂನ್ಯ ವೇಳೆ ಪ್ರಸ್ತಾಪಕ್ಕೆ ಸರ್ಕಾರದ ಉತ್ತರ.**
**(ದಿ: 11/8/2025 ಕ್ರ.ಸಂ:9)**

**ಪ್ರಶ್ನೆ:** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿ ಒಟ್ಟು 1800 ನಿವೃತ್ತ ನೌಕರರು ಇದ್ದು,ಅವರಿಗೆ ಪ್ರತಿ ತಿಂಗಳು ಪಿಂಚಣಿ ಹಣ ಪಾವತಿಸಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ನಿವೃತ್ತ ಶಿಕ್ಷಕ ಹಾಗೂ ಶಿಕ್ಷಕೇತರ ಸಂಘದವರು ಪ್ರತಿ ಭಾರಿ ಪ್ರತಿಭಟನೆ ಮಾಡಿಯೇ ಪಿಂಚಣಿ ಪಡೆಯುವ ವಾತಾವರಣ ನಿರ್ಮಾಣವಾಗಿರುವುದು. ಇದು ಯಾವ ಸರ್ಕಾರಕ್ಕೆ ಶೋಭೆ ತರುವಂತಹ ವಿಷಯವಲ್ಲ.

ವಿಶ್ವವಿದ್ಯಾಲಯಕ್ಕೆ ನಿವೃತ್ತ ನೌಕರರಿಗೆ ಪಿಂಚಣಿ ಹಣ ವಿತರಣೆ ಮಾಡಲು ವರ್ಷಕ್ಕೆ ಸುಮಾರು 126.00ಕೋಟಿ 11.00ಲಕ್ಷ ಹಣ ಬೇಕಾಗಿರುವುದು. ಇದರಲ್ಲಿ ಸರ್ಕಾರ ಇಲ್ಲಿಯವರೆಗೆ ಸುಮಾರು 55.00ಕೋಟಿ ಮಾತ್ರ ಬಿಡುಗಡೆಗೊಳಿಸಿರುವುದು. ಹೀಗಾಗಿ 1 ಸೆಪ್ಟೆಂಬರ್ 2025ಕ್ಕೆ ಪಿಂಚಣಿ ವಿತರಣೆ ಮಾಡಲು ವಿಶ್ವವಿದ್ಯಾಲಯದಲ್ಲಿ ಹಣ ಇರುವುದಿಲ್ಲ. ಮತ್ತು ಇದಲ್ಲದೆ ಆಂತರಿಕ ಮೂಲಗಳಿಂದ ಸಂಗ್ರಹಿಸಿ ವಿತರಣೆ ಮಾಡಲು ಯಾವ ಅವಕಾಶಗಳು ಇರುವುದಿಲ್ಲ. ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಸಂಪೂರ್ಣ ಕಷ್ಟದಲ್ಲಿರುವುದು.

ಈ ಎಲ್ಲಾ ವಿಚಾರದ ಹಿನ್ನಲೆಯಲ್ಲಿ ಸರ್ಕಾರ ಮಾರ್ಚ್ ತಿಂಗಳ ಕೊನೆಯವರೆಗೆ ನಿವೃತ್ತ ನೌಕರರಿಗೆ ಪ್ರತಿ ತಿಂಗಳು ಪಿಂಚಣಿ ಹಣ ಸರಿಯಾಗಿ ವಿತರಿಸಲು ಇನ್ನೂ ಬಿಡುಗಡೆ ಮಾಡಬೇಕಾದ ಪಿಂಚಣಿ ಗ್ರಾಂಟ್ 71.00ಕೋಟಿ 11.00ಲಕ್ಷ ಹಣವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸುವ ಬಗ್ಗೆ.

**ಉತ್ತರ:**

ಕರ್ನಾಟಕ ವಿಶ್ವವಿದ್ಯಾಲಯಕ್ಕೆ 2024-25ನೇ ಸಾಲಿನಲ್ಲಿ ಪಿಂಚಣಿಗಾಗಿ ರೂ. 112.67ಕೋಟಿ ಅನುದಾನದ ಅವಶ್ಯಕತೆ ಇದ್ದು, ಸರ್ಕಾರದಿಂದ 2024-25ನೇ ಸಾಲಿನ ಆಯವ್ಯಯದಲ್ಲಿ ರೂ.50.00ಕೋಟಿಗಳನ್ನು ಹಂಚಿಕೆ ಮಾಡಲಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದಿಂದ ಹೆಚ್ಚುವರಿ ಕೋರಿಕೆ ಪ್ರಸ್ತಾವನೆಗಳು ಸ್ವೀಕೃತವಾಗಿದ್ದರಿಂದ, ಹೆಚ್ಚುವರಿಯಾಗಿ ರೂ.20.00ಕೋಟಿ ಅನುದಾನವನ್ನು ದಿನಾಂಕ: 29/11/2024ರ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿದೆ. ಒಟ್ಟಾರೆ 2024-25ನೇ ಸಾಲಿನಲ್ಲಿ ಪಿಂಚಣಿಗಾಗಿ ರೂ.70.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

2025-26ನೇ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಪಿಂಚಣಿ/ಪಿಂಚಣಿ ಸೌಲಭ್ಯಗಳಿಗಾಗಿ ರೂ.126.11ಕೋಟಿ ಅನುದಾನದ ಕೋರಿಕೆ ಸಲ್ಲಿಸಿದ್ದು, ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ರೂ.55.00 ಕೋಟಿಗಳನ್ನು ಒದಗಿಸಲಾಗಿದೆ. ಈ ಅನುದಾನವನ್ನು ನಾಲ್ಕು

ತ್ರೈಮಾಸಿಕ ಕಂತುಗಳನ್ನು ಬಿಡುಗಡೆಗೊಳಿಸಬೇಕಿದ್ದು, ಪ್ರಸ್ತುತ ಮೂರು ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ವಿವರ ಕೆಳಕಂಡಂತಿದೆ:-

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಶ್ವವಿದ್ಯಾಲಯ ಹೆಸರು/ಪ್ರಧಾನ ಶೀರ್ಷಿಕೆ | ಪ್ರಥಮ ಕಂತು | ದ್ವಿತೀಯ ಕಂತು | ತೃತ್ರೀಯ ಕಂತು | ಒಟ್ಟು |
|---|---|---|---|---|---|
| 1. | ಕರ್ನಾಟಕ ವಿಶ್ವವಿದ್ಯಾಲಯ 2202-03-102-0-02-118-ಸಹಾಯಾನುದಾನ ವಿಶ್ರಾಂತಿ ವೇತನಗಳು | 13.75 | 13.75 | 13.75 | 41.25 |

ವಿಶ್ವವಿದ್ಯಾಲಯದ ಕೋರಿಕೆಯಂತೆ 2025-26ನೇ ಸಾಲಿನ ಪಿಂಚಣಿ ಸೌಲಭ್ಯಗಳಿಗಾಗಿ ರೂ.71.11ಕೋಟಿ ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ.

ಪ್ರತಿ ಆಯವ್ಯಯದಲ್ಲಿ ಆರ್ಥಿಕ ಇಲಾಖೆಯು ವಿಶ್ವವಿದ್ಯಾಲಯಗಳ ವೇತನಕ್ಕಾಗಿ ಸಂಪೂರ್ಣ ಅನುದಾನವನ್ನು ಒದಗಿಸುತ್ತದೆ. ಪಿಂಚಣಿ ಸೌಲಭ್ಯಗಳಿಗಾಗಿ ಭಾಗಶ: ಅನುದಾನವನ್ನು ಮಾತ್ರ ಬಿಡುಗಡೆಗೊಳಿಸಲಾಗುತ್ತಿ . ಪಿಂಚಣಿ ಸೌಲಭ್ಯಗಳಿಗಾಗಿ ಬಾಕಿ/ಹೆಚ್ಚುವರಿ ಅನುದಾನವನ್ನು ವಿಶ್ವವಿದ್ಯಾಲಯಗಳ ಆಂತರಿಕ ಸಂಪನ್ಮೂಲಗಳಿಂದ ಭರಿಸಬೇಕಾಗಿರುತ್ತದೆ.

ಆದ್ದರಿಂದ, ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದ ಶೇ.65%ಕ್ಕೂ ಹೆಚ್ಚು ಮೊತ್ತವನ್ನು (ರೂ.46ಕೋಟಿ) ಅತಿಥಿ ಉಪನ್ಯಾಸಕರು/ಹೊರಗುತ್ತಿಗೆ/ತಾತ್ಕಾಲಿಕ/ಬೋಧಕೇತರ ಸಿಬ್ಬಂದಿಯ ವೇತನ/ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದು ಇದು ಅಸಮಾನವಾಗಿ (disproportionately high) ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯವು ಮೊದಲಿಗೆ ಅಸಮಾನ ವೆಚ್ಚವನ್ನು ಸರಿಪಡಿಸಿಕೊಂಡು, ವಿಶ್ವವಿದ್ಯಾಲಯದ ಅನಗತ್ಯ ವೆಚ್ಚವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಅಗತ್ಯ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು, ವಿಶ್ವವಿದ್ಯಾಲಯದ ಪಿಂಚಣಿ ಸೌಲಭ್ಯಗಳಿಗಾಗಿ ಅವಶ್ಯವಿರುವ ಬಾಕಿ ಅನುದಾನವನ್ನು ವಿಶ್ವವಿದ್ಯಾಲಯವು ಆಂತರಿಕ ಸಂಪನ್ಮೂಲಗಳಿಂದ ಭರಿಸಬೇಕಾಗಿರುತ್ತದೆ.

ಕಡತ ಸಂಖ್ಯೆ: ಇಡಿ 113 ಹೆಚ್‌ಪಿಸಿ 2025

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು